*ಕರ್ನಾಟಕ ಸರ್ಕಾರ* *(ಸಿ.ಆರ್.ಪಿ.67)*

| |
|---|
| *ಹೇಳಿಕೆ ಹಾಳೆ* |
| *(ಆರ್.ಪಿ.ಸಂಖ್ಯೆ: 57)* |
| *ನಮೂನೆ ಸಂಖ್ಯೆ 4* |
| *(ಸಿವಿಲ್)* |

***1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ***
***ವಿಶೇಷ ಸತ್ರ ಪ್ರಕರಣ ಸಂಖ್ಯೆ: 39/2014***

***ಪ್ರಾ.ಸಾ.: 09***

***ದಿನಾಂಕ: 14.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.***

| | | |
|---|---|---|
| *ಸಾಕ್ಷಿದಾರರ ಹೆಸರು* | :- | ಕೃಷ್ಣಪ್ಪ |
| *ತಂದೆ ಹೆಸರು* | :- | ಲೇಟ್. ಪಿ.ವೆಂಕಟಪ್ಪ |
| *ವಯಸ್ಸು* | :- | *52* ವರ್ಷ |
| *ಉದ್ಯೋಗ* | :- | ಎಎಸ್ಐ, ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ |
| *ವಾಸಸ್ಥಳ* | :- | ಚಿಂತಾಮಣಿ |

**ಕಲಂ *299* ಸಿ.ಆರ್.ಪಿ.ಸಿ. ಯಡಿಯಲ್ಲಿ ಸಾಕ್ಷಿಯ ವಿಚಾರಣೆ**

***ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-***

1. ನಾನು *2016* ರಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯ ಕೈವಾರ ಹೊರ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿ: *15.05.2016* ರಂದು ಈ ಪ್ರಕರಣದಲ್ಲಿ ತಲೆಮರಿಸಿಕೊಂಡಿರುವ ಹರೀಶ್ ವಿರುದ್ಧ ಹೊರಡಿಸಿದ ಉದ್ಘೋಷಣೆಯನ್ನು ಜಾರಿ ಮಾಡಲು ನನಗೆ ಪಿಎಸ್ಐ ರವರು ನೇವುಕ ಮಾಡಿದರು. ಅದೇ ದಿನ ನಾನು ದೊಡ್ಡಗುಟ್ಟಹಳ್ಳಿ ಗ್ರಾಮಕ್ಕೆ ಹೋಗಿ ಪಂಚರನ್ನು ಬರಮಾಡಿಕೊಂಡು *2*ನೇ ಆರೋಪಿ ಬಗ್ಗೆ ಗ್ರಾಮದಲ್ಲಿ ವಿಚಾರಿಸಲಾಗಿ, *2*ನೇ ಆರೋಪಿ ಎರಡು ವರ್ಷಗಳ ಹಿಂದೆ ಗ್ರಾಮವನ್ನು

ಬಿಟ್ಟು ಹೋದವರು ವಾಪಸ್ಸು ಬಂದಿರುವುದಿಲ್ಲ, ಅವರ ವಿಳಾಸ ಗೊತ್ತಿಲ್ಲವೆಂದು ಹೇಳಿದ್ದು, ಆ ಬಗ್ಗೆ ಊರಿನಲ್ಲಿ ಟಾಮ್ ಟಾಮ್ ಹೊಡೆಸಿ ಉದ್ಘೋಷಣೆ ಪ್ರತಿಯನ್ನು ಹಾಲಿನ ಡೈರಿಯ ಮುಂಭಾಗ, ಅಂಗನವಾಡಿ ಕೇಂದ್ರದ ಗೋಡೆಗೆ, ಬಸ್ ನಿಲ್ದಾಣದ ಹತ್ತಿರ ಅಂಟಿಸಿ *2*ನೇ ಆರೋಪಿ ಹರೀಶ್ ದಿಃ *20.06.2016* ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ಜಾರಿ ಮಾಡಿರುತ್ತೇನೆ. ಸದರಿ ಉದ್ಘೋಷಣೆಯನ್ನು ನಿಪಿ *21* ಎಂದು ಗುರುತಿಸಲಾಯಿತು.

3. ಮಹಜರ್ ನ್ನು ನಿಪಿ *22,* ಸಾಕ್ಷಿ ರುಜುವನ್ನು ನಿಪಿ *22(ಎ)* ಎಂದು ಗುರುತಿಸಲಾಯಿತು. ಮಸ್ತೇನಹಳ್ಳಿ ಗ್ರಾಮ ಪಂಚಾಯ್ತಿಯವರು ಆರೋಪಿಯ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲವೆಂದು ವರದಿಯನ್ನು ನೀಡಿದ್ದು, ವರದಿಯನ್ನು ನಿಪಿ *23* ಎಂದು ಗುರತಿಸಲಾಯಿತು. ಈ ಬಗ್ಗೆ ತಹಸೀಲ್ದಾರ್ ರವರು ಗ್ರಾಮಲೆಕ್ಕಾಧಿಕಾರಿಯವರ ವರದಿಯೊಂದಿಗೆ ಪತ್ರವರನ್ನು ನೀಡಿದ್ದು, ಅದರ ಪ್ರಕಾರ *2*ನೇ ಆರೋಪಿಯ ಹೆಸರಿನಲ್ಲಿ ಯಾವುದೇ ಚಿರ ಹಾಗೂ ಚರ ಆಸ್ತಿಗಳು ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಸದರಿ ವರದಿಗಳನ್ನು ನಿಪಿ *24* ಮತ್ತು *25* ಎಂದು ಗುರುತಿಸಲಾಯಿತು.

*ಪಾಟೀಸವಾಲುಃ* ಆರೋಪಿ ತಲೆಮರಿಸಿಕೊಂಡಿದ್ದಾರೆ.

*(ದಿನಾಂಕಃ* 14.12.2021 *ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

*ಓದಿ ಹೇ ಕೇ ಸರಿ ಇದೆ*

*(ಎಸ್. ನಟರಾಜ್)*
*1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಚಿಕ್ಕಬಳ್ಳಾಪುರ.*